# ಬ್ರಹ್ಮಸ್ವರೂಪ



❋ ಬ್ರಹ್ಮ ಆಕಾಶದ ಹಾಗೆ, ಆತನಲ್ಲಿ ಯಾವ ವಿಕಾರವೂ ಇಲ್ಲ. ಆದರೆ ಶಕ್ತಿಯ ದೆಸೆಯಿಂದ ಆತ ನಾನಾ ರೂಪ ಧರಿಸಿದ್ದಾನೆ. ಮತ್ತೆ ಬ್ರಹ್ಮ ಯಾವ ಬಣ್ಣವೂ ಇಲ್ಲದ ಬೆಂಕಿಯ ಹಾಗೆ: ಬೆಂಕಿಗೆ ಬಿಳಿ ಬಣ್ಣ ಹಾಕಿದರೆ ಬೆಳ್ಳಗೆ, ಕೆಂಪು ಬಣ್ಣ ಹಾಕಿದರೆ ಕೆಂಪಗೆ, ಕಪ್ಪು ಬಣ್ಣ ಹಾಕಿದರೆ ಕಪ್ಪಗೆ ಕಾಣಿಸಿಕೊಳ್ಳುತ್ತದೆ. ಸತ್ತ್ವ, ರಜಸ್ಸು, ತಮಸ್ಸು ಈ ಮೂರು ಗುಣಗಳೂ ಶಕ್ತಿಗೆ ಸೇರಿದುವು. ಬ್ರಹ್ಮ ಇವು ಮೂರಕ್ಕೂ ಅತೀತ. ಆತ ಏನು ಎಂಬುದನ್ನು ಮಾತಿನಿಂದ ಹೇಳಲಾಗುವುದಿಲ್ಲ. ಆತ ವಾಕ್ಯಗಳಿಗೆ ಅತೀತ, 'ನೇತಿ, ನೇತಿ' ಅಂತ ವಿಚಾರ ಮಾಡಿ ಕೊನೆಗೆ ಏನು ಉಳಿದುಕೊಳ್ಳುವುದೋ, ಮತ್ತೆ ಯಾವುದು ಆನಂದ ಸ್ವರೂಪವೋ ಅದೇ ಬ್ರಹ್ಮ.

❋ ಒಬ್ಬ ಹುಡುಗಿಯ ಗಂಡ ಮಾವನ ಮನೆಗೆ ಬಂದು ಬೈಠಕ್‌ಖಾನೆಯಲ್ಲಿ ತನ್ನ ಸಮವಯಸ್ಕ ಗೆಳೆಯರೊಡನೆ ಕುಳಿತಿದ್ದಾನೆ ಅಂತ ಇಟ್ಟುಕೊ. ಹುಡುಗಿಯೂ, ಆಕೆಯ ಗೆಳತಿಯರೂ ಕಿಟಕಿಯಿಂದ ಅವರ ಕಡೆ ನೋಡುತ್ತಿದ್ದಾರೆ. ಆ ಹುಡುಗಿಯ ಗೆಳತಿಯರಿಗೆ ಅಲ್ಲಿ ಕುಳಿತವರಲ್ಲಿ ಆಕೆಯ ಪತಿ ಯಾರೆಂಬುದು ಗೊತ್ತಿಲ್ಲ. ಆದ್ದರಿಂದ ಅವರು ಒಬ್ಬನನ್ನು ತೋರಿಸಿ ಆಕೆಯನ್ನು ಕೇಳುತ್ತಾರೆ: 'ಆತ ನಿನ್ನ ಪತಿಯೆ?' ಆಕೆ ನಗುತ್ತ ಹೇಳುತ್ತಾಳೆ 'ಅಲ್ಲ.' ಗೆಳತಿಯರು ಇನ್ನೊಬ್ಬನನ್ನು ತೋರಿಸಿ ಅದೇ ಪ್ರಶ್ನೆಯನ್ನು ಹಾಕುತ್ತಾರೆ. ಮತ್ತೆ ಆಕೆ ಹೇಳುತ್ತಾಳೆ: 'ಅಲ್ಲ.' ಅವರು ಮೂರನೆಯವನನ್ನು ತೋರಿಸಿದಾಗಲೂ ಅವರಿಗೆ ಅದೇ ಉತ್ತರ ದೊರೆಯುತ್ತದೆ. ಕೊನೆಗೆ ಆಕೆಯ ಪತಿಯನ್ನು ತೋರಿಸಿ ಕೇಳುತ್ತಾರೆ: 'ಆತ ನಿನ್ನ ಪತಿಯೆ?' ಆಗ ಆಕೆ 'ಹೌದು' ಅಂತಲೂ ಹೇಳುವುದಿಲ್ಲ. 'ಅಲ್ಲ' ಅಂತಲೂ ಹೇಳುವುದಿಲ್ಲ. ನಸುನಗೆ ನಕ್ಕು ಸುಮ್ಮನಿದ್ದುಬಿಡುತ್ತಾಳೆ. ಆಗ ಗೆಳತಿಯರಿಗೆ ಗೊತ್ತಾಗುತ್ತದೆ, ಆತನೇ ಆಕೆಯ ಪತಿ ಎಂಬುದಾಗಿ.

❋ ನಿಜವಾದ ಬ್ರಹ್ಮಜ್ಞಾನ ದೊರೆಯಿತು ಎಂದರೆ ಸಾಧಕ ಮೂಕನಾಗಿಬಿಡುತ್ತಾನೆ. *(ಶ್ರೀರಾಮಕೃಷ್ಣ ವಚನವೇದ, ಸಂ.೧, ಪು.೨೫೯)*

❋ ಬ್ರಹ್ಮಜ್ಞಾನ ದೊರೆತ ನಂತರ ಮಾತ್ರ ಅಭೇದ ಜ್ಞಾನ — ಬ್ರಹ್ಮನಿಗೂ ಶಕ್ತಿಗೂ ಅಭೇದ ಎಂಬ ಜ್ಞಾನ ಉಂಟಾಗುತ್ತದೆ. ಬೆಂಕಿ, ಅದರ ಸುಡುವ ಶಕ್ತಿ ಅನನ್ಯವಾಗಿರುವ ಹಾಗೆ ಬ್ರಹ್ಮ, ಆತನ ಶಕ್ತಿ ಅನನ್ಯ. ಬೆಂಕಿಯನ್ನು ಭಾವಿಸಿದರೆ, ಬೆಂಕಿಯ ಸುಡುವ ಶಕ್ತಿಯನ್ನು ಭಾವಿಸಲೇಬೇಕು; ಮತ್ತೆ ಹಾಲು, ಹಾಲಿನ ಬಿಳುಪು; ನೀರು, ನೀರಿನ ತೋಯುವ ಶಕ್ತಿ; ಇವುಗಳ ಹಾಗೆ ಬ್ರಹ್ಮ, ಆತನ ಶಕ್ತಿ ಅನನ್ಯ.

❋ ಬ್ರಹ್ಮಜ್ಞಾನಾವಸ್ಥೆಗೂ ಅತೀತವಾದ್ದು ಬೇರೊಂದಿದೆ. ಜ್ಞಾನ ದೊರೆತ ಮೇಲೆ ವಿಜ್ಞಾನ. ಯಾರಿಗೆ ಜ್ಞಾನದ ಅರಿವು ಇದೆಯೋ, ಆತನಿಗೆ ಅಜ್ಞಾನದ ಅರಿವೂ ಇರುತ್ತದೆ. ವಸಿಷ್ಠ ತನ್ನ ನೂರು ಮಕ್ಕಳನ್ನೂ ಕಳೆದುಕೊಂಡಿದ್ದಕ್ಕಾಗಿ ಶೋಕಾಕ್ರಾಂತನಾದ. ವಸಿಷ್ಠನಂಥ ಜ್ಞಾನಿ ಏಕೆ ಪುತ್ರಶೋಕಾಕ್ರಾಂತನಾಗಬೇಕು ಎಂಬುದಾಗಿ ಲಕ್ಷ್ಮಣ ರಾಮನನ್ನು ಕೇಳಿದಾಗ, ಆತ ಹೇಳಿದ: 'ನೀನು ಜ್ಞಾನಾಜ್ಞಾನಗಳಿಗೆ ಅತೀತನಾಗು.' ಯಾರಲ್ಲಿ ಜ್ಞಾನವು ಇರುತ್ತದೆಯೋ, ಆತನಲ್ಲಿ ಅಜ್ಞಾನವೂ ಇರುತ್ತದೆ. ಕಾಲಿಗೆ ಮುಳ್ಳು ಚುಚ್ಚಿಕೊಂಡರೆ, ಬೇರೆ ಒಂದು ಮುಳ್ಳನ್ನು ಹುಡುಕಿ ತಂದು ಅದನ್ನು ತೆಗೆಯಬೇಕಾಗುತ್ತದೆ; ಬಳಿಕ ಎರಡನೆಯ ಮುಳ್ಳನ್ನೂ ಬಿಸಾಡಿ ಬಿಡಬೇಕು.

❋ ಶಿಷ್ಯ : ''ಹಾಗಾದರೆ, ಜ್ಞಾನ-ಅಜ್ಞಾನ ಎರಡನ್ನೂ ತ್ಯಜಿಸಿ ಬಿಡಬೇಕೇನು?''

❋ ಶ್ರೀರಾಮಕೃಷ್ಣರು: ''ಹೌದು, ವಿಜ್ಞಾನವೆಂಬುದಿರುವುದೇ ಅದಕ್ಕಾಗಿ. ಹಾಗೇ ನೋಡು, ಯಾರಿಗೆ ಬೆಳಕಿನ ಅರಿವು ಇದೆಯೋ, ಆತನಿಗೆ ಕತ್ತಲೆಯ ಅರಿವೂ ಇರುತ್ತದೆ. ಯಾರಿಗೆ ಸುಖದ ಬೋಧೆ ಇರುವುದೋ, ಆತನಿಗೆ ದುಃಖದ ಬೋಧೆ ಕೂಡ ಇರುತ್ತದೆ. ಯಾರಿಗೆ ಒಳ್ಳೆಯದರ ತಿಳಿವು ಇರುವುದೋ, ಆತನಿಗೆ ಕೆಟ್ಟದರ ತಿಳಿವೂ ಇರುತ್ತದೆ. ಯಾರಿಗೆ ನಾನು ಎಂಬುದರ ಅರಿವು ಇರುವುದೋ, ಆತನಿಗೆ ನೀನು ಎಂಬುದರ ಅರಿವೂ ಇರುತ್ತದೆ.'' *(ಶ್ರೀರಾಮಕೃಷ್ಣ ವಚನವೇದ, ಸಂ.೧, ಪು.೨೬೯-೭೦)*

❋ ನಿಜವಾಗಿ ಇರುವುದು ಒಂದೇ ಹೊರತು ಎರಡಲ್ಲ. ಮನುಷ್ಯ ಭಗವಂತನನ್ನು ಯಾವ ಹೆಸರಿನಿಂದ ಬೇಕಾದರೂ ಕರೆಯಲಿ, ಹೃತ್ಪೂರ್ವಕವಾಗಿ ಭಗವಂತನನ್ನು ಕರೆದುದೇ ಆದರೆ ಆತ ಭಗವಂತನ ಸಾಕ್ಷಾತ್ಕಾರವನ್ನು ಪಡೆದೇ ಪಡೆಯುತ್ತಾನೆ. ವ್ಯಾಕುಲತೆ ಇತ್ತು ಎಂದರೆ ಜಯ.

❋ ಆ ಒಂದರಿಂದಲೇ ಅನೇಕ ಉಂಟಾಗಿದೆ. ನಿತ್ಯದಿಂದಲೇ ಲೀಲೆಯ ಉದ್ಭವ. ಒಂದು ಅವಸ್ಥೆ ಇದೆ. ಅದರಲ್ಲಿ ಅನೇಕವೂ ಹೊರಟುಹೋಗುತ್ತದೆ. ಹಾಗೆಯೇ ಇದೂ ಕೂಡ. ಏಕೆಂದರೆ ಒಂದು ಎಂಬುದು ಇತ್ತು ಎಂದರೆ, ಎರಡು ಎಂಬುದು ಇರಲೇಬೇಕು. ಬ್ರಹ್ಮ ಅನುಪಮ-ಉಪಮೆಯ ಮೂಲಕ ಆತನನ್ನು ಅರಿಯುವಂತಿಲ್ಲ. ಆತ ಬೆಳಕಿಗೂ ಅಂಧಕಾರಕ್ಕೂ ಮಧ್ಯೆ. ಆತ ಬೆಳಕೇನೋ ನಿಜ, ಆದರೆ ನಮ್ಮ ಈ ಬೆಳಕಲ್ಲ-ಈ ಜಡಬೆಳಕಲ್ಲ.

*(ಶ್ರೀರಾಮಕೃಷ್ಣ ವಚನವೇದ, ಸಂ.೧, ಪು.೨೯೪-೯೬)*

**ಶ್ರೀರಾಮಕೃಷ್ಣ ವಚನವೇದದಿಂದ**